ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ದಿಃ-**18.03.2026** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎನ್.ಆರ್.ಎಸ್ ವಕೀಲರಿಂದಃ-**

ನಾನು ಪದವಿಧರ. ನನ್ನ ಮತ್ತು ಜಗದೀಶ್ ಈತನು ಮನೆಯು 700 ಮೀಟರ್ ಅಂತರದಲ್ಲಿವೆ. ನಾನು ಜಗದೀಶನಾ ಮನೆಯಲ್ಲಿ 5-6 ವರ್ಷಗಳಿಂದ ಬಾಡಿಗೆಗೆ ಇದ್ದೆ ಎಂದರೆ ಸರಿ. ಆತನ ಪರಿಚಯ ನನಗೆ ಇರುತ್ತದೆ. ಅವರ ಮನೆಯವರು ನನಗೆ ಪರಿಚಿತರು. ಘಟನಾ ದಿನದಂದು ಫಿರ್ಯಾದಿ ನೀಡಲು ನನಗೆ ಏನು ತೊಂದರೆ ಇರಲಿಲ್ಲ. ಘಟನಾ ದಿನದಂದು 50-60 ಜನ ಘಟನಾ ಸ್ಥಳದಲ್ಲಿ ಇರಲಿಲ್ಲ, ಕೇವಲ 10-15 ಜನ ಮಾತ್ರ ಇದ್ದರು ಎಂದು ನುಡಿಯುತ್ತಾರೆ. ಘಟನಾ ದಿನದಂದು ಚಾಸಾ.1 ಜಗದೀಶ್ ಈತನ ಬಟ್ಟೆ ರಕ್ತಮಯವಾಗಿತ್ತು. ಘಟನಾ ದಿನದಂದು ಘಟನೆ ನಡೆದ ಕಾಲಕ್ಕೆ ಚಾಸಾ.1 ಜಗದೀಶ್ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಆತನನ್ನು ನಾನು ಆಸ್ಪತ್ರೆಗೆ ಕರೆದುಕೊಂಡು ಹೋಗಿರಲಿಲ್ಲ. ಸಾಕ್ಷಿಯು ಮುಂದುವರೆದು ತನಗಿಂತ ಮುಂಚೆಯೇ ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆನಂತರ ನಾನು ಆಸ್ಪತ್ರೆ ಕಡೆ ಹೋಗಿಲ್ಲ. ಸದರಿ ವಿಷಯದ ಕುರಿತು ಚಾಸಾ.1 ಜಗದೀಶ್ ಈತನ ತಾಯಿಗಾಗಲಿ ಅಥವಾ ಅವನ ಹೆಂಡತಿಗಾಗಲಿ ನಾನು ವಿಷಯ ತಿಳಿಸಿಲ್ಲ. ಚಾಸಾ.1 ಜಗದೀಶ್ ಬಿದ್ದ ಸ್ಥಳದಲ್ಲಿ ರಕ್ತಮಯವಾಗಿತ್ತು ಎಂದರೆ ಸಾಕ್ಷಿಯು ಅಷ್ಟೇನು ರಕ್ತ ಬಿದ್ದಿರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿತರು ಚಾಸಾ.1 ಜಗದೀಶ್ ಈತನಿಗೆ ಹಲ್ಲೆ ಮಾಡಿದ ನಂತರ ಅವರನ್ನು ಹಿಡಿಯಲು ಹೋಗಿರಲಿಲ್ಲ ಎಂದರೆ ಅವರು ನನ್ನಿಂದ ದೂರ ಇದ್ದ ಕಾರಣ ಮತ್ತು ಅವರ ಬಳಿ ಚಾಕು ಇದ್ದ ಕಾರಣ ನಾನು ಅವರನ್ನು ಹಿಡಿಯಲು ಹೋಗಿರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆ, ಸಮಯದಲ್ಲಿ ಪೋಲಿಸರಿಗೆ ವಿಷಯ ತಿಳಿಸಲು ನನಗೆ ಯಾವುದೇ ತೊಂದರೆ ಇತ್ತ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ವಿಷಯದ ಕುರಿತು

ಪೋಲಿಸರಿಗೆ ಆಗಲೆ ವಿಷಯ ಗೊತ್ತಾಗಿತ್ತು ಎಂದು ನುಡಿಯುತ್ತಾರೆ. ನಾನು ಹೋದಾಗ ಪೋಲಿಸರು ಘಟನಾ ಸ್ಥಳಕ್ಕೆ ಇನ್ನು ಬಂದಿರಲಿಲ್ಲ.

ಘಟನಾ ಸ್ಥಳದಲ್ಲಿ 3 ಕಡೆ ಸಿಸಿಟಿವಿ ಕ್ಯಾಮಾರಾಗಳನ್ನು ಅಳವಡಿಸಲಾಗಿತ್ತು ಎಂದರೆ ಸರಿಯಲ್ಲ. ನಾನು ಘಟನೆಗೆ ಕುರಿತಂತೆ ಪೋಲಿಸ್ ಠಾಣೆಗೆ ಎಂದೂ ಹೋಗಿಲ್ಲ ಎಂದರೆ ಸರಿಯಲ್ಲ. ಪೋಲಿಸ್ ಠಾಣೆಯಲ್ಲಿ ನನ್ನ ಹೇಳಿಕೆ ಪಡೆದಿರುತ್ತಾರೆ. ನಾನು ನೀಡಿದ ಹೇಳಿಕೆಗೆ ಪೋಲಿಸರು ಸಹಿ ಪಡೆದಿರುತ್ತಾರೆ. ನಾನು ಹತ್ತಿರ ಹೋಗುವಷ್ಟರಲ್ಲಿ ಆರೋಪಿತರು ಅಲ್ಲಿಂದ ಓಡಿ ಹೋಗಿರುತ್ತಾರೆ ಎಂಬ ವಿಷಯವನ್ನು ಪೋಲಿಸರಿಗೆ ತಿಳಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಜುಮೋಟದಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಪೋಲಿಸರು ನನ್ನಿಂದ ಯಾವುದೇ ದಾಖಲೆ ಪಡೆದುಕೊಂಡಿಲ್ಲ. ನಾನು ಜುಮೋಟಾದಲ್ಲಿ ಕೆಲಸ ಮಾಡದೆ ಇರುವ ಕಾರಣ ಅವರು ನನ್ನ ಬಳಿ ದಾಖಲೆ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ಚಾಕುವನ್ನು ಘಟನಾ ಸ್ಥಳದಲ್ಲಿ ಬಿಸಾಕಿರಲಿಲ್ಲ, ಆತನು ಚಾಕು ಸಮೇತ ಓಡಿಹೋಗಿರುತ್ತಾನೆ. ಮು.ಮಾ.1 ಅನ್ನು ನಾನು ಈ ಹಿಂದೆ ನೋಡಿಲ್ಲ ಎಂದರೆ ಸರಿಯಲ್ಲ. ಸದರಿ ಮುದ್ದೆ ಮಾಲುನ್ನು ಕಳೆದ ಸಲ ನ್ಯಾಯಾಲಯಕ್ಕೆ ಬಂದಾಗ ಪ್ರಥಮಾ ಬಾರಿ ನೋಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಚಾಕುವಿಗೆ ರಕ್ತ ತಗುಲಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಚಾಕುವಿನ ಅಳತೆ ನನಗೆ ಗೊತ್ತಿಲ್ಲ. ಆರೋಪಿತರು ಅದನ್ನು ಹಿಡಿದುಕೊಂಡು ದೂರ ಇದ್ದ ಕಾರಣ ನನಗೆ ಅದರ ಅಳತೆ ಗೊತ್ತಾಗಿಲ್ಲ. ನಾನು, ಚಂದ್ರಶೇಖರ, ಜಗದೀಶ್ ಮತ್ತು ಮುನಿರಾಜು ಪರಸ್ಪರ ಪರಿಚಿತರು ಎಂದರೆ ಸರಿ. ಜಗದೀಶ್ ಮತ್ತು ಆರೋಪಿತರ ಮದ್ಯೆ ಸೈಟ್ ನ ಬಗ್ಗೆ ಪ್ರಕರಣವಿದೆ ಎಂದು ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಘಟನಾ ದಿನದಂದು ಯಾವುದೇ ಘಟನೆ ನಡೆಯದೆ ಇದ್ದರು, ಅದನ್ನು ನಾನು ನೋಡದೆ ಇದ್ದರು ಜಗದೀಶ್ ನನ್ನ ಸ್ನೇಹಿತನಾದ ಕಾರಣ ಆತನಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರನ್ನು ನಾನು ನ್ಯಾಯಾಲಯಕ್ಕೆ ಬಂದಾಗ ಪ್ರಥಮ ಬಾರಿಗೆ

ನೋಡಿದ್ದೆ ಎಂದರೆ ಸರಿಯಲ್ಲ. ಆರೋಪಿಯು ಜಗದೀಶ್ ಯಾವುದೇ ಹಲ್ಲೆ ಮಾಡದೆ ಇದ್ದರು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಗದೀಶ್ ಮತ್ತು ಪೋಲಿಸರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.
ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ

**(ಗಂಗಪ್ಪ ಈರಪ್ಪ ಪಾಟೀಲ್)**
**52** ನೇ ಅ.ನ.ಸಿ.ಸೆ.ನ್ಯಾಯಾಧೀಶರು
**(ಸಿಸಿಹೆಚ್-53), ಬೆಂಗಳೂರು.**